# ಲಾವೋ ಪಿಡಿಆರ್‌ನ ವೀಯೆಂಟಿಯಾನ್‌ನಲ್ಲಿ ಪೂರ್ವ ಏಷ್ಯಾ ಶೃಂಗ(ಇಎಎಸ್) ಮತ್ತು ಆಸಿಯಾನ್ ಪ್ರಾದೇಶಿಕ ಫೋರಂ(ಎಆರ್‌ಎಫ್) ಹಿರಿಯ ಅಧಿಕಾರಿಗಳ ಸಭೆ(ಎಸ್‌ಒಎಂ)

ಜೂನ್ 09, 2024

ಲಾವೋ ಪಿಡಿಆರ್‌ನ ವೀಯೆಂಟಿಯಾನ್‌ನಲ್ಲಿ 2024ರ ಜೂನ್ 7-8ರಂದು ನಡೆದ ಪೂರ್ವ ಏಷ್ಯಾ ಶೃಂಗದ ಹಿರಿಯ ಅಧಿಕಾರಿಗಳ ಸಭೆ(ಇಎಎಸ್ ಎಸ್‌ಒಎಂ) ಮತ್ತು ಆಸಿಯಾನ್ ಪ್ರಾದೇಶಿಕ ಫೋರಂನ ಹಿರಿಯ ಅಧಿಕಾರಿಗಳ ಸಭೆ (ಎಆರ್‌ಎಫ್ ಎಸ್‌ಒಎಂ)ಯಲ್ಲಿ ವಿದೇಶಾಂಗ ಇಲಾಖೆಯ ಕಾರ್ಯದರ್ಶಿ(ಪೂರ್ವ) ಶ್ರೀ ಜೈದೀಪ್ ಮಜುಮ್ದಾರ್ ಅವರು ಭಾರತವನ್ನು ಪ್ರತಿನಿಧಿಸಿದರು.

2. ಲಾವೋ ಪಿಡಿಆರ್‌ನ ಉಪ ವಿದೇಶಾಂಗ ಸಚಿವರಾದ ಗೌರವಾನ್ವಿತ ಶ್ರೀ.ಥಾಂಗ್‌ಫೇನ್ ಸಾವನ್ಫೆಟ್ ಅವರು 2024ರ ಜೂನ್ 7ರಂದು ನಡೆದ ಇಎಎಸ್ ಎಸ್‌ಒಎಂನ ಅಧ್ಯಕ್ಷತೆ ವಹಿಸಿದ್ದರು. ಪೂರ್ವ ಏಷ್ಯಾ ಶೃಂಗದಲ್ಲಿ ಭಾಗಿಯಾದ 18 ದೇಶಗಳ ಹಿರಿಯ ಅಧಿಕಾರಿಗಳು (10 ಆಸಿಯಾನ್ ಸದಸ್ಯ ರಾಷ್ಟ್ರಗಳು ಮತ್ತು ಆಸ್ಟ್ರೇಲಿಯಾ, ಚೀನಾ, ಭಾರತ, ಜಪಾನ್, ನ್ಯೂಜಿಲೆಂಡ್, ರಿಪಬ್ಲಿಕ್ ಆಫ್ ಕೊರಿಯಾ ರಷ್ಯಾ ಮತ್ತು ಯುಎಸ್‌ನಂತಹ ಆಸಿಯಾನ್‌ನ 8 ಸಂವಾದ ಪಾಲುದಾರರು) ಮತ್ತು ಟಿಮೋರ್-ಲೆಸ್ಟೆ ಈ ಪೂರ್ವ ಏಷ್ಯಾ ಶೃಂಗದ ಹಿರಿಯ ಅಧಿಕಾರಿಗಳ ಸಭೆಯಲ್ಲಿ ಪಾಲ್ಗೊಂಡಿದ್ದರು. ವಿವಿಧ ರಾಷ್ಟ್ರಗಳ ನಾಯಕರ ನೇತೃತ್ವದ ಇಎಎಸ್ ವೇದಿಕೆಯನ್ನು ಬಲಪಡಿಸುವಿಕೆ, ಇಂಡೋ-ಪೆಸಿಫಿಕ್(ಎಒಐಪಿ) ಕುರಿತ ಆಸಿಯಾನ್ ದೃಷ್ಟಿಕೋನದ ಅನುಷ್ಠಾನ, ದಕ್ಷಿಣ ಚೀನಾ ಸಮುದ್ರ, ಗಾಜಾ, ಕೊರಿಯಾ ಪರ್ಯಾಯ ದ್ವೀಪ, ಮ್ಯಾನ್ಮಾರ್ ಮತ್ತು ಉಕ್ರೇನ್‌ನಲ್ಲಿನ ಸ್ಥಿತಿಗತಿ ಮುಂತಾದ ಪ್ರಾದೇಶಿಕ ಮತ್ತು ಅಂತಾರಾಷ್ಟ್ರೀಯ ವಿಚಾರಗಳ ಬಗ್ಗೆ ಪ್ರಮುಖವಾಗಿ ಚರ್ಚಿಸಲಾಯಿತು. ಈ ವೇಳೆ ಮಾತನಾಡಿದ ಕಾರ್ಯದರ್ಶಿ(ಪೂರ್ವ), ಇಂಡೋ-ಪೆಸಿಫಿಕ್ ಪ್ರದೇಶದಲ್ಲಿ ಶಾಂತಿ ಮತ್ತು ಸ್ಥಿರತೆಯನ್ನು ಉತ್ತೇಜಿಸುವ ಪ್ರಮುಖ ಕಾರ್ಯವಿಧಾನವಾಗಿ ಇಎಎಸ್ ನಿರ್ವಹಿಸಿರುವ ಪ್ರಮುಖ ಪಾತ್ರವನ್ನು ಒತ್ತಿಹೇಳಿದರು. ಇಂಡೋ-ಪೆಸಿಫಿಕ್ ಸಾಗರಗಳ ಉಪಕ್ರಮ(ಐಪಿಒಐ) ಮತ್ತು ಎಒಐಪಿ ನಡುವಿನ ಬಲಿಷ್ಠ ಒಗ್ಗೂಡುವಿಕೆ ಬಗ್ಗೆಯೂ ಅವರು ಗಮನ ಸೆಳೆದರು. ಇದೇ ಸಂದರ್ಭದಲ್ಲಿ, ನೌಕಾ ಭದ್ರತಾ ಸಹಕಾರಕ್ಕೆ ಸಂಬಂಧಿಸಿ 2024ರ ಜುಲೈ 4-5ರಂದು ಮುಂಬೈನಲ್ಲಿ ನಡೆಯಲಿರುವ 6ನೇ ಇಎಎಸ್ ಸಮಾವೇಶಕ್ಕೆ ಭಾರತ ನೀಡಿದ ಆಹ್ವಾನವನ್ನು ಎಲ್ಲರೂ ಸ್ವಾಗತಿಸಿದರು.

3. 2024ರ ಜೂನ್ 8ರಂದು ನಡೆದ ಆಸಿಯಾನ್ ಪ್ರಾದೇಶಿಕ ಫೋರಂ ಹಿರಿಯ ಅಧಿಕಾರಿಗಳ ಸಭೆ(ಎಆರ್‌ಎಫ್ ಎಸ್‌ಒಎಂ)ಯಲ್ಲಿ ಎಆರ್‌ಎಫ್ ಸದಸ್ಯ ರಾಷ್ಟ್ರಗಳ ಹಿರಿಯ ಅಧಿಕಾರಿಗಳು ಪಾಲ್ಗೊಂಡಿದ್ದರು. ಪ್ರಸ್ತುತ ಆಸಿಯಾನ್‌ನ ಅಧ್ಯಕ್ಷ ಸ್ಥಾನವನ್ನು ವಹಿಸಿರುವ ಲಾವೋ ಪಿಡಿಆರ್ ನೇತೃತ್ವದಲ್ಲಿ ಈ ಸಭೆ ನಡೆಯಿತು. ಕಳೆದೊಂದು ವರ್ಷದಲ್ಲಿ ಎಆರ್‌ಎಫ್‌ನಡಿ ನಡೆದ ಚಟುವಟಿಕೆಗಳು ಮತ್ತು ವಿನಿಮಯಗಳನ್ನು ಪರಿಶೀಲಿಸಲಾಯಿತು ಮತ್ತು ಸಭೆಯಲ್ಲಿ ಭವಿಷ್ಯದ ಯೋಜನೆಗಳು ಹಾಗೂ ಚಟುವಟಿಕೆಗಳ ಬಗ್ಗೆ ಚರ್ಚಿಸಲಾಯಿತು. ಪ್ರಾದೇಶಿಕ ಮತ್ತು ಅಂತಾರಾಷ್ಟ್ರೀಯ ಬೆಳವಣಿಗೆಗಳು, ಕಡಲು ಮತ್ತು ಸೈಬರ್ ಭದ್ರತೆಗೆ ಸಂಬಂಧಿಸಿದ ವಿಚಾರಗಳು ಸೇರಿದಂತೆ ಹಲವಾರು ವಿಷಯಗಳ ಕುರಿತು ಹಿರಿಯ ಅಧಿಕಾರಿಗಳು ಅಭಿಪ್ರಾಯಗಳನ್ನು ಹಂಚಿಕೊಂಡರು. ಈ ಪ್ರದೇಶದಲ್ಲಿ ಪರಸ್ಪರ ವಿಶ್ವಾಸ ಮತ್ತು ತಿಳಿವಳಿಕೆಯನ್ನು ಉತ್ತೇಜಿಸುವ ನಿಟ್ಟಿನಲ್ಲಿ ರೂಪುಗೊಂಡ ಉದಯೋನ್ಮುಖ ಪ್ರಾದೇಶಿಕ ಪರಿಕಲ್ಪನೆಯಲ್ಲಿ

ಆಸಿಯಾನ್ ನೇತೃತ್ವದ ಕಾರ್ಯವಿಧಾನಗಳು ಮತ್ತು ವಿಶೇಷವಾಗಿ ಎಆರ್‌ಎಫ್‌ನ ಪಾತ್ರವನ್ನು ಕಾರ್ಯದರ್ಶಿ(ಪೂರ್ವ) ಶ್ಲಾಘಿಸಿದರು. ಭಯೋತ್ಪಾದನೆಯು ಒಡ್ಡಿರುವ ಬೆದರಿಕೆಗಳ ಕುರಿತಾಗಿ ನಮ್ಮ ಕಳವಳಗಳನ್ನು ಅವರು ಹಂಚಿಕೊಂಡರು ಮತ್ತು ಈ ವಿಚಾರದಲ್ಲಿ ಸಾಮೂಹಿಕವಾಗಿ ಕ್ರಮ ಕೈಗೊಳ್ಳುವಂತೆ ಕರೆ ನೀಡಿದರು. 2024ರ ಮೇ ತಿಂಗಳಲ್ಲಿ ಇಂಡೋನೇಷ್ಯಾ ಮತ್ತು ಯುನೈಟೆಡ್ ಸ್ಟೇಟ್ಸ್‌ನೊಂದಿಗೆ ನೌಕಾ ಭದ್ರತೆ ಕುರಿತ 15ನೇ ಎಆರ್‌ಎಫ್ ಅಂತರ-ಅಧಿವೇಶನ ಸಭೆಯ ಸಹ ಅಧ್ಯಕ್ಷತೆಯನ್ನು ಭಾರತ ವಹಿಸಿರುವುದಕ್ಕೆ ಸರ್ವರೂ ಶ್ಲಾಘನೆ ವ್ಯಕ್ತಪಡಿಸಿದರು. ಫಿಲಿಪ್ಪೀನ್ಸ್, ಪಪುವಾ ನ್ಯೂಗಿನಿ ಮತ್ತು ಯುನೈಟೆಡ್ ಸ್ಟೇಟ್ಸ್ ಜೊತೆಗೆ ಭಾರತವು ಅಂತಾರಾಷ್ಟ್ರೀಯ ಹಡಗು ಮತ್ತು ಬಂದರು ಸೌಲಭ್ಯ ಭದ್ರತೆ(ಐಎಸ್‌ಪಿಎಸ್) ಸಂಹಿತೆಯ ತರಬೇತಿ ನಮೂನೆಯ ನೇತೃತ್ವವನ್ನೂ ವಹಿಸಿದೆ.

4. ಭೇಟಿಯ ವೇಳೆ ಕಾರ್ಯದರ್ಶಿ(ಪೂರ್ವ)ಗಳು ಲಾವೋ ಪಿಡಿಆರ್, ಜಪಾನ್, ಕಾಂಬೋಡಿಯಾ, ವಿಯೆಟ್ನಾಂ, ಆಸ್ಟ್ರೇಲಿಯಾ, ಫಿಲಿಪ್ಪೀನ್ಸ್ ಮತ್ತು ಐರೋಪ್ಯ ಒಕ್ಕೂಟದ ಕಾರ್ಯದರ್ಶಿಗಳೊಂದಿಗೆ ದ್ವಿಪಕ್ಷೀಯ ಮಾತುಕತೆ ನಡೆಸಿದರು. ಈ ಸಭೆಯಲ್ಲಿ ದ್ವಿಪಕ್ಷೀಯ ಸಹಕಾರದ ಬಗ್ಗೆ ಪರಿಶೀಲನೆ ನಡೆಸುವುದರ ಜೊತೆಗೆ, ಪ್ರಾದೇಶಿಕ ದೃಷ್ಟಿಕೋನಗಳನ್ನೂ ಹಂಚಿಕೊಳ್ಳಲಾಯಿತು.

**ನವದೆಹಲಿ**
**ಜೂನ್ 09, 2024**